**ಈ ದಿನ ದಿನಾಂಕಃ 04.10.2023 ರಂದು ಪಿಡಬ್ಲ್ಯೂ-15 ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಟಿ.ಜಿ.ವಿ. ವಕೀಲರಿಂದಃ**

25. ಚಾಸಾ-35 ಬಸವನಗೌಡ ಪಾಟೀಲ್ ಅವರಿಂದ ದಿನಾಂಕಃ 08.01.2019 ರಂದು ಎಷ್ಟು ಗಂಟೆಗೆ ಪ್ರಕರಣದ ಕಡತವನ್ನು ಪಡೆದುಕೊಂಡಿರುತ್ತೆನೆಂದು ನಿಖರವಾದ ಸಮಯವನ್ನು ಹೇಳಲು ಬರುವುದಿಲ್ಲ. ದಿನಾಂಕಃ 08.01.2019 ರಂದು ಪ್ರಕರಣದ ಕಡತವನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಪ್ರಕರಣ ದಾಖಲಾದ ನಂತರ ಪ್ರಕರಣದ ಮಾಹಿತಿ ಬಂದಿತ್ತು, ಆದರೆ ದಿನಾಂಕಃ 08.01.2019 ರ ಪೂರ್ವದಲ್ಲಿ ಆಸ್ಪತ್ರೆಗೆ ಬೇಟಿ ಕೊಟ್ಟಿರಲಿಲ್ಲ. ಪ್ರಕರಣದ ಕಡತವನ್ನು ಪಡೆದುಕೊಂಡ ನಂತರ ಆಸ್ಪತ್ರೆಗೆ ಎಷ್ಟು ಗಂಟೆಗೆ ಬೇಟಿ ಮಾಡಿರುತ್ತೇನೆಂದು ನಿಖರವಾಗಿ ಸಮಯವನ್ನು ಹೇಳಲು ಬರುವುದಿಲ್ಲ. ಮೌಖಿಕವಾಗಿ ಪಿರ್ಯಾದುದಾರರನ್ನು ಠಾಣೆಗೆ ಕರೆಸಿರುತ್ತೆನೆ, ಆದರೆ ನೋಟೀಸು ನೀಡಿರಲಿಲ್ಲ. ಅದೇ ರೀತಿ ಪಂಚರಾದ ಚಾಸಾ-3 ಮತ್ತು 4 ರವರಿಗೂ ಸಹ ಲಿಖಿತ ನೋಟೀಸು ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಹೇಳಿ ಬರಹೇಳಿರುತ್ತೇನೆ.

26. ಸ್ಥಳ ಮಹಜರ್‌ಗೆ ಹೋದ ಸಮಯದಲ್ಲಿ ನನ್ನ ಜೊತೆಯಲ್ಲಿದ್ದ ಸಿಬ್ಬಂಧಿಯವರ ಹೆಸರು ಈಗ ಹೇಳಲು ಬರುವುದಿಲ್ಲ. ಸ್ಥಳ ಮಹಜರ್‌ನ ಸಮಯದಲ್ಲಿ ಸ್ಥಳದಲ್ಲಿ ಪೋಟೋ ತೆಗೆದ ಪೋಟೋ ಗ್ರಾಫರ್‌ನನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ಸೇರಿಸಿರುವುದಿಲ್ಲ. ಸ್ಥಳ ಮಹಜರ್‌ನ ಸಮಯದಲ್ಲಿ ಮಣ್ಣು ಮಿಶ್ರಿತ ಖಾರದ ಪುಡಿಯನ್ನು ಅಮಾನತ್ತುಪಡಿಸಿಕೊಂಡಿರುವು ದಿಲ್ಲ. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಸ್ಥಳದಲ್ಲಿ ನಮ್ಮ ಠಾಣಾ ಸಿಬ್ಬಂಧಿಗಳು ಇರಲಿಲ್ಲ.

ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಸ್ಥಳವನ್ನು ಸಂರಕ್ಷಿಸಿರಲಿಲ್ಲ. ಕಾರಣ ಸದರಿ ಸ್ಥಳದ ಬಗ್ಗೆ ನಮಗೆ ಗೊತ್ತಿರಲಿಲ್ಲ, ದೂರುದಾರರು ತೋರಿಸಿದ ನಂತರ ಗೊತ್ತಾಗಿರುತ್ತದೆ. ಶವತನಿಖೆಯ ಸಮಯದಲ್ಲಿ ಪಂಚರಾದ ಚಾಸಾ-5 ರಿಂದ 7 ರವರಿಗೆ ಲಿಖಿತ ನೋಟೀಸು ನೀಡಿ ಕರೆಸಿದ್ದೇನು.

27. ಈ ಪ್ರಕರಣದಲ್ಲಿ ತೆಗೆದ ಎಲ್ಲಾ ಫೋಟೋಗಳನ್ನು ನಮ್ಮ ಇಲಾಖಾ ಸಿಬ್ಬಂಧಿಯವರೇ ಇಲಾಖೆಗೆ ನೀಡಿದ ಕ್ಯಾಮೇರಾದಿಂದ ತೆಗೆದಿರುವುದರಿಂದ ಪ್ರತ್ಯೇಕವಾಗಿ ಫೋಟೋಗ್ರಾಫರ್ ಅವರನ್ನು ಕರೆಸಿರುವುದಿಲ್ಲ ಮತ್ತು ಆ ಕಾರಣ ಸಾಕ್ಷಿದಾರರಾಗಿ ಮಾಡಿರುವುದಿಲ್ಲ. ಸದರಿ ವಿಚಾರವನ್ನು ಪ್ರಕರಣದ ದಾಖಲೆಗಳಲ್ಲಿ ತಿಳಿಸಿರುತ್ತೇನೆ. ಆ ರೀತಿ ನಾನು ದಾಖಲೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ಪ್ರಥಮ ಬಾರಿ ಆ ರೀತಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು 28 ದಿನಗಳ ವಿಳಂಬವಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ ವಿಳಂಬದ ಬಗ್ಗೆ ಕಾರಣಗಳನ್ನು ಹೇಳಿರುವುದಿಲ್ಲ ಎಂದರೆ ತಿಳಿಸುವ ಅವಶ್ಯಕತೆಯಿರಲಿಲ್ಲ.

28. ದಿನಾಂಕಃ 08.01.2019 ರಂದು ಗಾಯಾಳು ಹೇಳಿಕೆ ನೀಡುವ ಸ್ಥಿತಿಯಲ್ಲಿರುವುದಿಲ್ಲ ಎಂದು ಹೇಳಿದ್ದರಿಂದ ದಿನಾಂಕಃ 09.01.2019 ರಂದು ಹೇಳಿಕೆ ನೀಡುವ ಸ್ಥಿತಿಯಲ್ಲಿರುತ್ತಾನೆಂದು ವೈದ್ಯರು ಹೇಳಿದ್ದರಿಂದ ಆ ದಿನ ದಾಖಲಿಸಿಕೊಂಡಿರುತ್ತೇನೆ. ಗಾಯಾಳು ಚಾಸಾ-2 ಪವನ್ ಅಲಿಯಾಸ ಬೆಂಕಿ ಈತನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳುವ ಸಮಯದಲ್ಲಿ ಹಾಜರಿದ್ದ ವೈದ್ಯರಾದ ಡಾ|| ಅರುಣ್‌ಕುಮಾರ್ ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿ ತೋರಿಸಿರುವುದಿಲ್ಲ. ಪವನನು ಹಾಜರುಪಡಿಸಿದ ರಕ್ತದ ಕಲೆಯಾಗಿದ್ದ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಪಂಚರಾದ ಚಾಸಾ-13 ಮತ್ತು 14 ರವರಿಗೆ ಲಿಖಿತ

ನೋಟೀಸು ನೀಡಿರುವುದಿಲ್ಲ ಆದರೆ ಹಾಗೇ ಮೌಖಿಕವಾಗಿ ಕರೆಸಿರುತ್ತೇನೆ. ಚಾಸಾ-2 ರವರಿಂದ ರಕ್ತದ ಕಲೆಯಾಗಿದ್ದ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಪಂಚರ ಸಮೇತ ಫೋಟೋ ತೆಗೆದಿರುವುದಿಲ್ಲ.

29. ದಿನಾಂಕಃ 10.01.2019 ರ ಪೂರ್ವದಲ್ಲಿ ಆರೋಪಿತರ ಪತ್ತೆಗಾಗಿ ಯಾವುದೇ ಸಿಬ್ಬಂಧಿಗಳನ್ನು ನೇಮಿಸಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಸಮಯದಲ್ಲಿ ನಮ್ಮ ಕಚೇರಿಯ ಸಿಬ್ಬಂಧಿ ಇದ್ದರು, ಆದರೆ ಬೇರೆ ಯಾವ ಸಾಮಾನ್ಯ ಜನರು ಇರಲಿಲ್ಲ. ದಂಡಾಧಿಕಾರಿಗಳ ಮುಂದೆ ಹಾಜರುಪಡಿಸಿ ಆರೋಪಿಯ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ಸರಿ. ಆರೋಪಿಯು ಆ ರೀತಿ ಯಾವುದೇ ಸ್ವ ಇಚ್ಛಾ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಆರೋಪಿಯ ಹೇಳಿಕೆಯನ್ನು ನಾವೇ ಸೃಷ್ಟಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಚಾಸಾ-14 ಮತ್ತು 15 ರವರಿಗೆ ಪಂಚರಾಗಿ ಬರಲು ಯಾವುದೇ ಲಿಖಿತ ನೋಟೀಸು ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಕರೆಸಿರುತ್ತೇನೆ.

30. ಆರೋಪಿ ಮಚ್ಚನ್ನು ತಂದು ಹಾಜರುಪಡಿಸಿದ ಸಂದರ್ಭದಲ್ಲಿ ಅದರ ಮೇಲಿನ ಬೆರಳಚ್ಚನ್ನು ಪರೀಕ್ಷೆಗಾಗಿ ಬೆರಳಚ್ಚು ಗುರುತನ್ನು ಪಡೆದಿರುವುದಿಲ್ಲ, ಕಾರಣ ಒರಟಾದ ವಸ್ತುಗಳ ಮೇಲೆ ಬೆರಳಚ್ಚು ಗುರುತು ಬೀಳುವುದಿಲ್ಲ. ದಿನಾಂಕಃ 10.01.2019 ರಂದು ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ದಿನಾಂಕಃ 06.02.2019 ರಂದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು 26 ದಿನಗಳು ವಿಳಂಬವಾದ ಬಗ್ಗೆ ಯಾವುದೇ ಕಾರಣವನ್ನು ತಿಳಿಸಿರುವುದಿಲ್ಲ ಎಂದರೆ ಅವಶ್ಯಕತೆಯಿರವುದಿಲ್ಲ. ನಮ್ಮ ಸಿಬ್ಬಂಧಿಯ ಯಾವುದೇ ಹೇಳಿಕೆಯನ್ನು

ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡ ದಿನಾಂಕಃ 09.01.2019 ರಂದು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಅವನ ಹೇಳಿಕೆಯನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇಲ್ಲದಿದ್ದರೂ ಸಹ 2 ದಿನಗಳ ವಿಳಂಬವಾಗಿ ದಿನಾಂಕಃ 11.01.2019 ರಂದು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೇಳಿಕೆ ಪಡೆದುಕೊಂಡಿರುತ್ತೇವೆಂದರೆ ಸರಿಯಲ್ಲ.

31. ಚಾಸಾ-2 ರವರಿಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನಾವು ಆತನಿಗೆ ಹೆದರಿಸಿ ಆರೋಪಿಯ ವಿರುದ್ಧ ಈ ರೀತಿ ಹೇಳಿಕೆ ನೀಡುವಂತೆ ಹೆದರಿಸಿರುತ್ತೇವೆಂದರೆ ಸರಿಯಲ್ಲ. ಸದರಿ ಪ್ರಕರಣದ ಕಡತವನ್ನು ಪಡೆದುಕೊಂಡ ದಿನಾಂಕಃ 08.01.2019 ರಂದು ಚಾಸಾ-17 ರಿಂದ 19 ರವರ ಹೇಳಿಕೆಯನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇಲ್ಲ ದಿದ್ದರೂ ಸಹ ಈ ಕೇಸಿಗೆ ಅನುಕೂಲವಾಗುವಂತೆ 3 ದಿನಗಳ ವಿಳಂಬವಾಗಿ ದಿನಾಂಕಃ 11.01.2019 ರಂದು ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಮೃತನ ಹಾಗೂ ಚಾಸಾ-2 ಪವನಕುಮಾರ್ ಅವರು ಉಪಯೋಗಿಸುತ್ತಿದ್ದ ಮೊಬೈಲ್ ನಂಬರ್ ಮತ್ತು ಮೊಬೈಲ್ ಬಗ್ಗೆ ವಿಚಾರಿಸಿರುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ತನಿಖೆಯನ್ನು ಮಾಡಿರುವು ದಿಲ್ಲ ಮತ್ತು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ.

32. ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿದ ದಿನಾಂಕಃ 10.01.2019 ರಂದು ಆರೋಪಿಯ ಬಳಿ ಮೊಬೈಲ್ ಇತ್ತೋ ಇಲ್ಲವೋ ವಿಚಾರಿಸಿರುವುದಿಲ್ಲ ಕಾರಣ ಅವರ ಮಧ್ಯೆ ಮೊಬೈಲ್ ಮೂಲಕ ಸಂಭಾಷಣೆ ಅಥವಾ ಮಾತುಕತೆಯಾದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದುದರಿಂದ ವಿಚಾರಿಸಿರುವುದಿಲ್ಲ. ಕೇಸಿಗೆ ಅನಾನುಕೂಲವಾಗುತ್ತದೆಂಬ ಕಾರಣದಿಂದ

ಮೃತ ಗಂಗಾಧರನ ಮತ್ತು ಚಾಸಾ-2 ಪವನ ಮತ್ತು ಆರೋಪಿತನ ಮೊಬೈಲ್‌ಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಆ ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಇರಲಿಲ್ಲ ಎಂಬ ಬಗ್ಗೆ ನಮಗೆ ಮಾಹಿತಿ ಇದ್ದರೂ ಸಹ ಉದ್ದೇಶಪೂರ್ವಕವಾಗಿ ದಾಖಲೆಗಳನ್ನು ಪಡೆದುಕೊಂಡು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಶವಪಂಚನಾಮೆಯ ಕಾಲಂ ನಂಬರ್ 4 ರಲ್ಲಿ ದಾಖಲಿಸಿರುವಂತೆ ಮೃತನು ಜೀವಂತ ಇದ್ದ ಸಮಯದಲ್ಲಿ ಕೊನೆಯದಾಗಿ ಅವನ ಅಣ್ಣ ಮಂಜುನಾಥನು ನೋಡಿರುತ್ತಾನೆಂದು ನಮೂದಿಸಿರುತ್ತೇವೆಂದರೆ ಸರಿ.

33. ಘಟನಾ ಸ್ಥಳದಲ್ಲಿ ಮತ್ತು ಆ ಸಮಯದಲ್ಲಿ ಮೃತ ಗಂಗಾಧರನ ಜೊತೆ ಪವನಕುಮಾರ ಇದ್ದಲ್ಲಿ ಕಾಲಂ ನಂಬರ್ 4 ಲ್ಲಿ ಪವನನ ಹೆಸರು ದಾಖಲಿಸಬೇಕಾಗಿದ್ದು ಆದರೆ ಪವನ ಕುಮಾರ ಸ್ಥಳದಲ್ಲಿ ಇಲ್ಲದೇ ಇದುದ್ದರಿಂದ ಅವನ ಹೆಸರನ್ನು ದಾಖಲಿಸದೇ ಮಂಜುನಾಥನ ಹೆಸರನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಮೃತ ಗಂಗಾಧರನ ವಿರುದ್ಧ ಬೇರೆ ಬೇರೆ ಠಾಣೆಗಳಲ್ಲಿ ಬೇರೆ ಬೇರೆ ಪ್ರಕರಣಗಳು ದಾಖಲಾಗಿದ್ದು ಅವರ ವಿರುದ್ಧ ರೌಡಿ ಶೀಟ್ ದಾಖಲಿಸಿದ್ದರು ಎಂದರೆ ಸರಿ. ಆದ್ದರಿಂದ ಸಾಮಾನ್ಯವಾಗಿ ಅವನ ವಿರುದ್ಧ ಅನೇಕ ಜನರ ದ್ವೇಷ ಇತ್ತು ಎಂದರೆ ಸರಿಯಲ್ಲ. ದಿನಾಂಕಃ 10.01.2019 ರಂದು ಅಮಾನತ್ತುಪಡಿಸಿಕೊಂಡ ಆರೋಪಿಯ ಬಟ್ಟೆಗಳು ಆರೋಪಿಯದ್ದೇ ಎಂದು ಗುರುತಿಸಲು ಅವುಗಳನ್ನು ಅಮಾನತ್ತುಪಡಿಸಿಕೊಳ್ಳುವ ಪೂರ್ವದಲ್ಲಿ ಅವುಗಳಿಗೆ ಸಂಬಂಧಪಟ್ಟಂತೆ ಪೋಟೋಗಳನ್ನು ಪರಿಶೀಲಿಸಿರುವುದಿಲ್ಲ. ಮೃತ ಗಂಗಾಧರನ ಮತ್ತು ಚಾಸಾ-2 ಪವನಕುಮಾರನ ರಕ್ತದ ಗುಂಪುಗಳನ್ನು ನಿರ್ಣಯಿಸಲು ವೈದ್ಯರಲ್ಲಿ ಮನವಿ ಪತ್ರವನ್ನು ಸಲ್ಲಿಸಿದ್ದೇನು.

34. ಮಚ್ಚನ್ನು ಅಮಾನತ್ತುಪಡಿಸಿಕೊಂಡ ನಂತರ ಅದೇ ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆಂಬ ಬಗ್ಗೆ ಪವನನನ್ನು ಠಾಣೆಗೆ ಕರೆಸಿ ಅವನಿಂದ ಮಚ್ಚನ್ನು ಗುರುತಿಸಿರುವುದಿಲ್ಲ. ವಿವಾದಿತ ಘಟನೆಯ ನಂತರ ಆರೋಪಿ ಮನೆಗೆ ಹೋಗಿ ತಾನು ಧರಿಸಿದ್ದ ಬಟ್ಟೆಗಳನ್ನು ಬಿಚ್ಚಿ ಬೇರೆ ಬಟ್ಟೆಗಳನ್ನು ಹಾಕಿಕೊಂಡಿರುತ್ತಾನೆಂದು ಹೇಳುವ ಸ್ಥಳಕ್ಕೆ ಹೋಗಿ ಮಹಜರ್ ಮಾಡಿರುವುದಿಲ್ಲ. ದಿನಾಂಕಃ 08.01.2019 ರಂದು ಸ್ಥಳಕ್ಕೆ ಹೋಗಿದ್ದ ಸಮಯದಲ್ಲಿ ಸ್ಥಳದಲ್ಲಿ ಹಲ್ಲು ಸಿಕ್ಕಿರುವುದಿಲ್ಲ. ನಿಪಿ-5 ರಿಂದ 8 ರ ಪೋಟೋಗಳಲ್ಲಿ ಮೃತನಿಗೆ ಆದ ಗಾಯಗಳಿಗೆ ಚಿಕಿತ್ಸೆ ನೀಡಿದ ಬಗ್ಗೆ ಮತ್ತು ಬ್ಯಾಂಡೇಜ್ ಸುತ್ತಿದ ಬಗ್ಗೆ ಕಂಡುಬಂದಿರುವುದಿಲ್ಲ ಎಂದರೆ ಸರಿ. ನಿಪಿ-2 ರ ಸ್ಥಳ ಮಹಜರ್‌ನ್ನು ನಮ್ಮ ಕಚೇರಿಯ ಹೆಚ್‌ಸಿ- ಕೃಷ್ಣಪ್ಪ ಎಂಬುವವರು ಟೈಪ್ ಮಾಡಿ ತಯಾರಿಸಿರುತ್ತಾರೆ. ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

35. ಸ್ಥಳ ಪಂಚನಾಮೆಯ ಚೆಕ್‌ಬಂದಿದಾರರಾದ ಪೂರ್ವದ ಭೂತಪಲ್ಲಿ ಶ್ರೀನಿವಾಸ ಅವರನ್ನು ಮತ್ತು ಪಶ್ಚಿಮದ ನಾರಾಯಣಪ್ಪ ಅವರನ್ನು, ವಾಯುವ್ಯ ದಿಕ್ಕಿನಲ್ಲಿರುವ ಡಿ.ಎಂ. ಚಂದ್ರಶೇಖರ್ ಅವನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಮಹಜರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಚೇರಿಯಲ್ಲಿಯೇ ಸ್ಥಳ ಮಹಜರ್‌ನ್ನು ಮತ್ತು ಅಮಾನತ್ತುಮಹಜರ್‌ನ್ನು ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ-3 ರಿಂದ 18 ಮತ್ತು ನಿಪಿ-21 ಹಾಗೂ 22 ರ ಪೋಟೋಗಳನ್ನು ನಮ್ಮ ಠಾಣಾ ಸಿಬ್ಬಂಧಿಯವರು ತೆಗೆದಿರುತ್ತಾರೆ, ಆದರೆ ನಿಖರವಾಗಿ ಅವರ ಹೆಸರನ್ನು ಹೇಳಲು ಬರುವುದಿಲ್ಲ. ಎಲ್ಲಾ ಅಮಾನತ್ತುಮಹಜರ್‌ನ್ನು ಠಾಣೆಯಲ್ಲಿಯೇ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ-26 ರ ಶವತನಿಖಾ ವರದಿಯ ಕಾಲಂ ನಂಬರ್ 7(16) ರಲ್ಲಿ ತಿಳಿಸಿದ ಎಡಕತ್ತಿನಲ್ಲಿ ನಾಲ್ಕು ಕಡೆ ಗೀಚಿದ ಗಾಯಗಳು, ಗೋಮಾಳ ಕಡೆಗೆ 3 ಕಡೆ

ಗೀಚಿದ ಗಾಯಗಳು ಮತ್ತು ಎದೆಯಲ್ಲಿ 3 ಕಡೆ ಅಡ್ಡಲಾಗಿ ಗೀಚಿದ ಗೆರೆಗಳು ಯಾರಿಂದ ಆಗಿರುತ್ತವೆಂಬುದನ್ನು ವಿಚಾರಿಸಿರುವುದಿಲ್ಲ, ಕಾರಣ ಅದನ್ನು ವೈದ್ಯರು ಹೇಳಬೇಕಾಗಿರುತ್ತದೆ.

36. ಚಾಸಾ-2 ಪವನನ ಮೇಲೆ ಆಗಿದ್ದ ಗಾಯಗಳು ಇದೇ ಮಚ್ಚಿನಿಂದ ಆಗಿರುತ್ತವೆಂಬ ಬಗ್ಗೆ ಸದರಿ ಮಚ್ಚನ್ನು ವೈದ್ಯರಲ್ಲಿಗೆ ಕಳುಹಿಸಿ ಅಭಿಪ್ರಾಯ ವರದಿಯನ್ನು ಪಡೆದಿರುತ್ತೇನೆ. ದಿನಾಂಕಃ 07.01.2019 ರಂದು ರಾತ್ರಿ ಘಟನಾ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಇಲ್ಲದಿದ್ದರೂ ಸಹ ನಿಪಿ-40 ನ್ನು ಹೇಳಿ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ-43 ರ ಮಾಲೀಕರಾದ ಜಯಪ್ರಕಾಶ ಅವರನ್ನು ಸಾಕ್ಷಿದಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸ್ಥಳ ಮಹಜರ್‌ಗಾಗಿ ಸ್ಥಳಕ್ಕೆ ಹೋಗಿದ್ದ ಸಮಯದಲ್ಲಿ ಕಚ್ಚಾ ನಕಾಶೆಯನ್ನು ಮಾಡಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದ ನಿಪಿ-43 ರ ದಾಖಲಾತಿಯನ್ನು ತಂದು ಕೊಟ್ಟಂತಹ ನಮ್ಮ ಠಾಣಾ ಸಿಬ್ಬಂಧಿಯಾದ ಪಾಂಡುರಂಗ ಅವರನ್ನು ಪ್ರಕರಣದಲ್ಲಿ ಸಾಕ್ಷಿದಾರರಾಗಿ ಮಾಡಿರುವುದಿಲ್ಲ.

37. ನಿಪಿ-44 ರಲ್ಲಿ ಘಟನೆ ನಡೆದಿದೆ ಎಂದು ಹೇಳುವ ಸ್ಥಳಕ್ಕೆ ದಿನಾಂಕಃ 11.03.2019 ರಂದು ಬೇಟಿ ಮಾಡಿರುತ್ತೇವೆಂದು ತಿಳಿಸಲಾಗಿರುತ್ತದೆಂದರೆ ಸರಿ. ನಿಪಿ-45 ರಲ್ಲಿ ಕಚ್ಚಾ ನಕಾಶೆಯನ್ನು ದಿನಾಂಕಃ 08.03.2019 ರಂದು ತಯಾರಿಸಲಾಗಿರುತ್ತದೆಂದು ಸಹಿ ಮಾಡಿರುತ್ತಾರೆಂದರೆ ಸರಿ. ಚಾಸಾ-2 ಪವನಕುಮಾರನ ವಿರುದ್ಧ ಸಾರ್ವಜನಿಕ ಆಸ್ತಿ ನಾಶಪಡಿಸಿದ ಬಗ್ಗೆ ಪ್ರಕರಣ ದಾಖಲಾದ ವಿಚಾರ ನನಗೆ ಗೊತ್ತಿದ್ದರೂ ಸಹ ಈ ಪ್ರಕರಣದಲ್ಲಿ ಸದರಿ ವಿಚಾರವನ್ನು ತಿಳಿಸಿರುವುದಿಲ್ಲ ಎಂದರೆ ಸರಿ, ಕಾರಣ ಅವಶ್ಯಕತೆಯಿರುವುದಿಲ್ಲ. ದಿನಾಂಕಃ 07.01.2019 ರಂದು ಚಾಸಾ-2 ಪವನಕುಮಾರ ಮತ್ತು ಮೃತ ಗಂಗಾಧರನು 4 ಬಾರಿ ಮಧ್ಯಪಾನ ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

38. ಮೃತ ಗಂಗಾಧರ ಮನೆಯಿಂದ ಬರುವ ಸಮಯದಲ್ಲಿಯೇ ಮಚ್ಚನ್ನು ತನ್ನ ಬಳಿಯಿಟ್ಟುಕೊಂಡಿದ್ದ ಎಂದರೆ ಸರಿ. ಆ ಕಾರಣದಿಂದ ಆತನ ಮೇಲೆ ದ್ವೇಷ ಇದ್ದವರು ಈ ಹಲ್ಲೆಯನ್ನು ಮಾಡಿದ್ದರೂ ಸಹ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆಂದರೆ ಸರಿಯಲ್ಲ. ದೂರು ಮತ್ತು ಪ್ರಥಮ ವರ್ತಮಾನ ವರದಿಯ ಮೇರೆಗೆ ಆರೋಪಿಯನ್ನು ಈಗಾಗಲೇ ಬಂಧಿಸಿದ್ದರಿಂದ ಬೇರೆ ಆರೋಪಿತರನ್ನು ಹಡುಕಲು ಕಷ್ಟಸಾಧ್ಯವಾಗುತ್ತದೆಂಬ ಕಾರಣ ದಿಂದ ಸದರಿ ಆರೋಪಿಯನ್ನೇ ಈ ಪ್ರಕರಣದಲ್ಲಿ ಸಿಲುಕಿಸಿ ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

39. ದೂರಿನಲ್ಲಿ ಮತ್ತು ಪ್ರಥಮ ವರ್ತಮಾನ ವರದಿಯಲ್ಲಿ ಕಬಾಬ ಲೋಕಿ ಮತ್ತು ಸ್ವಾಮಿ ಇವರನ್ನು ಆರೋಪಿತರಾಗಿ ತೋರಿಸಿದ್ದರೂ ಸಹ ಅವರ ವಿರುದ್ಧಕ್ರಮ ಕೈಗೊಳ್ಳದೇ ಕೇವಲ ಆರೋಪಿಯ ಮೇಲೆ ಕ್ರಮ ಕೈಗೊಂಡು ದೋಷಾರೋಪಣ ಪತ್ರ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಚಾಸಾ-2 ಪವನಕುಮಾರನ ಮೇಲೆ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಗಂಗಾಧರನ ಸಾವಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಮು.ಮಾ. 1 ರಿಂದ 12 ನ್ನು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ